ಅಕಾಡೆಮಿ, ವಿಭಾಗಗಳು ಹಾಳಾಗ್ತಾ ಬಂದವು. ಈಗ ವಿಶ್ವವಿದ್ಯಾಲಯದೊಳಗೂ ಮೊದಲಿನ ವಾತಾವರಣ ಇಲ್ಲ. ಹೀಗಾಗಿ ಹಿನ್ನಡೆ ಉಂಟಾಗ್ಯಾದ. ಇದೊಂದು ರೀತಿ ದುರಂತ.

◆ **ನೀವು ಸಂಪಾದಿಸಿದ 'ಹಾಲುಮತ ಮಹಾಕಾವ್ಯ' ಮಹತ್ವದ ಕೃತಿ. ಕರ್ನಾಟಕ ಸಂಸ್ಕೃತಿಯ ವಿಭಿನ್ನ ಧಾರೆಗಳನ್ನಿದು ಕಾಣಿಸಿದೆ. ಇದರ ಹುಡುಕಾಟ ಯಾವಾಗ ಶುರುವಾತು? ಇದನ್ನೆಲ್ಲ ಹ್ಯಾಗ ಕೂಡಿಸಿದ್ರಿ? ಜನಪದ ಮಹಾಕಾವ್ಯವೊಂದರ ಸಂಗ್ರಹದ ಅನುಭವ ತಿಳ್ಕೊಳ್ಳೊ ಆಸೆಯಿಂದ ಕೇಳ್ತಿದ್ದೀನಿ.**

ಬಿ.ಬಿ. ಹೆಂಡಿಯವರೆ ಇದನ್ನ ನನ್ನ ಗಮನಕ್ಕೆ ತಂದ್ರು. ಕರ್ನಾಟಕ ವಿಶ್ವವಿದ್ಯಾಲಯದವರು ಜಾನಪದ ಸಮ್ಮೇಳನ ಮಾಡ್ತಾರ. ಆವಾಗ ಕುರುಬರ ಹಾಡುಗಳ ಬಗ್ಗೆ ಮಾತಾಡ್ಲಿಕ್ಕೆ ನನಗ ಕರೆದಿದ್ರು. ಹಿಂದೊಮ್ಮೆ ಹೆಂಡಿಯವರು ಊರಿಗಿ ಹೊಂಟಿದ್ರು. ಅದೇ ಬಸ್ಸಿನೊಳಗ ಹಾಲುಮತ ಮಹಾಕಾವ್ಯದ ಗಾಯಕ ಸಿದ್ದಪ್ಪ ಮೇಟಿ ಕೂಡ ಇದ್ದ. ಅಂವ ಎಲ್ಲೋ ಹಾಡ್ಲಾಕ ಹೊಂಟಾನ ಕಾಣಿಸ್ತದ. ತನ್ನ ಮ್ಯಾಳಾದ ಜೊತಿಗಿ. ಇವರು ಕುತೂಹಲದಿಂದ ಮಾತಾಡಸ್ಯಾರ. ಇವ್ರು ಅವನಿಗಿ ಯೂನಿವರ್ಸಿಟಿಗಿ ಕರದಾರ. ಕ್ವಾರ್ಟರ್ಸ್ ಒಳಗ ಇಳಿಸಿದ್ವಿ. ಹಗಲೊತ್ತು ಏನನ್ನಿಸಲಿಲ್ಲ. ರಾತ್ರಿ ಅವರ ಹಾಡಿಗಿ ಸುತ್ತಮುತ್ತ ಇದ್ದ ಪ್ರೊಫೆಸರ್‌ಗಳದು ನಿದ್ದಿ ಹಾರೋಯ್ತು. ಒಂದಿಬ್ರು ಬಂದು ಜಗಳ ತೆಗೆದ್ರು. ಯಾವ ಹೇಳ್ಯಾನ್ ನಿಮಗ ನಡ್ರಿ ಅಕಡಿ ಅಂತ. ಹಿಂಗಾಗಿ ರಾತ್ರಿ ರೆಕಾರ್ಡಿಂಗ್ ನಿಲ್ಲಿಸಿದ್ವಿ. ಎಂಟತ್ತು ದಿವಸ ಕಂಟ್ಯೂನಿವ್ ನಡೀತು. ಅವ್ರು ದಮ್ಮಿಗಿ ಬಂದ್ರು. ಹಿಂಗಾಗಿ ಮನಿ ಕಡಿ

'ಹಾಲುಮತ ಮಹಾಕಾವ್ಯ' ಕುರುಬ ಸಮಾಜದ ಒಂದು ದೊಡ್ಡ ಸಾಂಸ್ಕೃತಿಕ ಗುರುತು. ಕುರುಬ ಸಮಾಜಕ್ಕೆ ಒಂದು ದೊಡ್ಡ ಆಧಾರ ಗ್ರಂಥ ಲಭಿಸಿತು. ಆದರೆ, ಇದು ಬರೀ ಕುರುಬರಿಗೆ ಸಂಬಂಧಪಟ್ಟ ಕೃತಿಯಲ್ಲ, ಶೈವ ಸಂಪ್ರದಾಯದ ಒಂದು ದೊಡ್ಡ ಧಾರ್ಮಿಕ ಗ್ರಂಥ. ಸಾಮಾನ್ಯರಲ್ಲಿ ಶೈವಧರ್ಮದ ಪರಿಕಲ್ಪನೆ ಏನಿತ್ತು ಅದನ್ನ ಹೇಳುವ ಕೃತಿಯಿದು.

